ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ, ಅಂಕೋಲಾ

ಸಿಸಿ ನಂಬರಃ 684/2021

ಫಿಯಾದಿಃ ಸರಕಾರ

– ವಿರುದ್ಧ –

ಆರೋಪಿ 6. ಅಶೋಕ ಗಣಪತಿ ರಾಯ್ಕರ್,
ಪ್ರಾಯಃ 38 ವರ್ಷ, ವೃತ್ತಿಃ ಅಕ್ಕಸಾಲಿಗ,
ಸಾಃ ಅರೆಕೊಪ್ಪ, ಬನವಾಸಿ ರಸ್ತೆ, ತಾಃ ಶಿರಸಿ

## ದೋಷಾರೋಪಣೆ

ನಾನು ಪ್ರಶಾಂತ ಬಾದವಾಡಗಿ, ಬಿ.ಎ..,ಎಲ್.ಎಲ್.ಬಿ.,(ಸ್ಪೇ) ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಅಂಕೋಲಾ, ಆರೋಪಿಯಾದ ನಿಮ್ಮ ಮೇಲೆ ಈ ಕೆಳಗಿನಂತೆ ದೋಷಾರೋಪಣೆ ಮಾಡುತ್ತಿದ್ದೇನೆ..

ದಿನಾಂಕಃ 10-06-2021 ರಂದು ಬೆಳಗಿನ ಜಾವ 1.00 ಗಂಟೆಯ ಸುಮಾರಿಗೆ ಅಂಕೋಲಾ ತಾಲೂಕಿನ ಬೊಬ್ರುವಾಡ ಗ್ರಾಮ ಪಂಚಾಯತ್‌ದ ತೆಂಕಣಕೇರಿಯ ನಿವಾಸಿಯಾದ ಫಿರ್ಯಾದಿ- ಶ್ರೀ ಸುಭಾಷ ತಂ. ನಾರಾಯಣ ನಾಯ್ಕ ರವರ ಮನೆಗೆ ಆರೋಪಿತರಾದ ಪ್ರಶಾಂತ, ಹರ್ಷ, ಶ್ರೀಕಾಂತ, ನಿಹಾಲ್ ಹಾಗೂ ಸಂದೀಪ ಇವರುಗಳು ಸೇರಿಕೊಂಡು ಹೋಗಿ ಮನೆಯ ಮುಂಬಾಗಿಲ ಬೀಗವನ್ನು ಮೀಟಿ ಮುರಿದು ಮನೆಯೊಳಗೆ ಪ್ರವೇಶಿಸಿ ಕಳ್ಳತನ ಮಾಡಿಕೊಂಡು ತಂದ ಬಂಗಾರದ ನೆಕ್ಲೇಸ್‌ನ್ನು ಕಳುವಿನ ಮಾಲು ಅಂತಾ ಗೊತ್ತಾಗಿದ್ದರೂ ಸಹ ತಿಳಿದೂ ತಿಳಿದೂ ಅಪ್ರಾಮಾಣಿಕವಾಗಿ ಅದನ್ನು ಸ್ವೀಕರಿಸಿ, ನಿಮ್ಮ ಸ್ವಾಧೀನದಲ್ಲಿಟ್ಟುಕೊಂಡಿರುತ್ತೀರಿ. ಆ ಮೂಲಕ ನೀವು ಭಾ ದಂ.ಸಂ.ಕಲಂ

411 ರಡಿಯಲ್ಲಿ ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಅಪರಾಧ ಮಾಡಿರುತ್ತೀರಿ ಅಂತಾ ನಿಮ್ಮ ಮೇಲೆ ದೋಷಾರೋಪಣೆ ಇರುತ್ತದೆ.

( ಮೇಲಿನ ಅಪರಾಧಗಳನ್ನು ಆರೋಪಿಯಾದ ನೀವು ಇದೇ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಲ್ಲಿ ಮತ್ತು ನನ್ನ ಸಂಜ್ಞೆಯತೆಯಲ್ಲಿ ಮಾಡಿದ್ದರಿಂದ ಸದರಿ ಅಪರಾಧಿಕ ಕಲಂಗಳ ವಿಚಾರಣೆಯನ್ನು ಇದೇ ನ್ಯಾಯಾಲಯದಲ್ಲಿ ನಡೆಯಬೇಕೆಂದು ಈ ಹೊತ್ತು ದಿನಾಂಕಃ 15.04.2023 ರಂದು ಆದೇಶಿಸುತ್ತೇನೆ.)

Sd/-

ಅಂಕೋಲಾ (ಪ್ರಶಾಂತ ಬಾದವಾಡಗಿ)

ದಿನಾಂಕಃ 15.4.2023 ಪ್ರ ದಂ ನ್ಯಾದಂ, ಅಂಕೋಲಾ.

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ, ಅಂಕೋಲಾ**

ಸಿಸಿ ನಂಬರ 684/2021

ಪಿರ್ಯಾದಿಃ ಸರಕಾರ – ವಿರುದ್ಧ – 6. ಅಶೋಕ ಗಣಪತಿ ರಾಯ್ಕರ್,

ಪ್ರ 1. ಮೇಲೆ ಓದಿ ಹೇಳಲಾದ ದೋಷಾರೋಪಣೆ ನಿಮಗೆ ಅರ್ಥವಾಯಿತೇ?
ಉತ್ತರಃ ತಿಳಿಯಿತು

ಪ್ರ 2. ಸದರಿ ದೋಷಾರೋಪಣೆಗೆ ನಿಮ್ಮ ಉತ್ತರವೇನು?
ಉತ್ತರಃ ಸುಳ್ಳು, ವಿಚಾರಣೆಯಾಗಲಿ

(ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿಗೆ ಓದಿ ಹೇಳಿದ ನಂತರ ಅವರು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿದ್ದೇನೆಂದು ದೃಢೀಕರಿಸುತ್ತೇನೆ.)

Sd/-
ಅಂಕೋಲಾ (ಪ್ರಶಾಂತ ಬಾದವಾಡಗಿ)
ದಿನಾಂಕಃ 15.4.2023 ಪ್ರ ದಂ ನ್ಯಾದಂ, ಅಂಕೋಲಾ.